# ಮಧುರಚೆನ್ನರ 'ನನ್ನ ನಲ್ಲ'

ಬಸೀರಾಬಾನು ನಿಡಗುಂದಿ

ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬಸವನ ಬಾಗೇವಾಡಿ.

DOI: https://doi.org/10.5281/zenodo.16677736

## ABSTRACT:

ಉತ್ತರ ಕರ್ನಾಟಕದ ವಿಜಯಪುರ ಜಿಲ್ಲೆಯ ಹಲಸಂಗಿ ಎಂಬ ಗ್ರಾಮದಲ್ಲಿ ಹುಟ್ಟಿದ 'ಹಲಸಂಗಿ ಗೆಳೆಯರ ಬಳಗ'ದ ಮೇಲೆ ಗಾಢ ಪರಿಣಾಮ ಬೀರಿದ್ದು ಜನಪದ ಸಾಹಿತ್ಯ. ೧೯೨೨ ರಲ್ಲಿ ಸ್ಥಾಪಿತವಾದ ಗೆಳೆಯರ ಬಳಗ, ೧೯೪೩ ರ ವರೆಗೆ ಈ ಗೆಳೆಯರು ಸಾಹಿತ್ಯಿಕ ಚಟುವಟಿಕೆಯಲ್ಲಿ ತೊಡಗಿದ್ದರು. ೧೯೪೩ರ ನಂತರ 'ಹಲಸಂಗಿ ಗೆಳೆಯರ ಬಳಗ', 'ಶ್ರೀ ಅರವಿಂದ ಮಂಡಳ'ವಾಗಿ ಪರಿವರ್ತನೆಗೊಂಡಿತು. ಹಲಸಂಗಿ ಗೆಳೆಯರ ಗುಂಪಿನ ಪ್ರಮುಖ ಸದಸ್ಯರೆಂದರೆ– ಮಧುರಚೆನ್ನ(ಚೆನ್ನಮಲ್ಲಪ್ಪ), ಸಿಂಪಿ ಲಿಂಗಣ್ಣ, ಪಿ. ಧೂಲಾಸಾಹೇಬ(ಪಟೇಲ್ ಕಾಸೀಮಸಾಬ), ಕಾಪಸೆ ರೇವಪ್ಪ, ಓಲೇಕಾರ ಮಾದಣ್ಣ, ಚೆನ್ನಪ್ಪ ಸರಸಂಬಿ, ಆದಮ ಮಸಳಿ, ಶಿವಲಿಂಗಪ್ಪ ಸರಸಂಬಿ, ಗುರುಬಸಪ್ಪ ಗಲಗಲಿ ಮತ್ತು ರಾಘವೇಂದ್ರ ಸುರಪುರ(ರಾಘಣ್ಣ). ಈ ಗುಂಪಿನ ಎಲ್ಲ ಸದಸ್ಯರು ಕರ್ನಾಟಕದ ಬೇರೆ ಬೇರೆ ಭಾಗದಲ್ಲಿ ಇರತಕ್ಕಂತಹ ಸಾಹಿತಿಗಳೊಂದಿಗೆ ಉತ್ತಮ ಸ್ನೇಹ ಸಂಬಂಧವನ್ನು ಹೊಂದಿದ್ದರು. ವರಕವಿ ಬೇಂದ್ರೆ, ಡಾ. ಶಿವರಾಮ ಕಾರಂತ, ರಂ. ಶ್ರೀ ಮುಗಳಿ, ವಿ. ಕೃ. ಗೋಕಾಕ ಮತ್ತು ಸ. ಸ. ಮಾಳವಾಡ ಇವರೆಲ್ಲ ಹಲಸಂಗಿಗೆ ಬಂದು ಹಲಸಂಗಿ ಗೆಳೆಯರ ಬಳಗದೊಂದಿಗೆ ನವೀನ ಚಿಂತನೆಗಳನ್ನು ಹಂಚಿಕೊಳ್ಳುತ್ತಿದ್ದರು.

## KEYWORDS:

ಮಧುರಚೆನ್ನ, ನನ್ನ ನಲ್ಲ, ಹಲಸಂಗಿ ಗೆಳೆಯರ ಬಳಗ, ಅನುಭಾವಿ ಗೀತೆ, ವಿಜಯಪುರ.

ಹೊಸಗನ್ನಡ ಸಾಹಿತ್ಯ ಚರಿತ್ರೆಯಲ್ಲಿ ಒಟ್ಟು ನಾಲ್ಕು ಗೆಳೆಯರ ಗುಂಪುಗಳನ್ನು ಕಾಣುತ್ತೇವೆ. ಹಲಸಂಗಿ ಗೆಳೆಯರ ಗುಂಪು, ಬೇಂದ್ರೆ ಗೆಳೆಯರ ಗುಂಪು, ಮಂಗಳೂರು ಗೆಳೆಯರ ಗುಂಪು ಮತ್ತು ಬಿ. ಎಂ. ಶ್ರೀ ಗೆಳೆಯರ ಗುಂಪು. ಹಲಸಂಗಿ'ಯ ಹೆಸರು ಕನ್ನಡ ಸಾಹಿತ್ಯದ ಇತಿಹಾಸದಲ್ಲಿ ಚಿರಸ್ಥಾಯಿಯಾಗಿ ಉಳಿಯುವಂತೆ ಮಾಡಿದವರು ಮಧುರಚೆನ್ನರು. 'ಮಧುರಚೆನ್ನ' ಎಂಬುದು ಅವರ ಕಾವ್ಯನಾಮ. ಚೆನ್ನಮಲ್ಲಪ್ಪ ಸಿದ್ಧಲಿಂಗಪ್ಪ ಗಲಗಲಿ ಅವರ ಪೂರ್ಣ ಹೆಸರು. ಇವರ ಪೂರ್ವಜರು ಬಾಗಲಕೋಟ ಜಿಲ್ಲೆಯ ಬೀಳಗಿ ತಾಲೂಕಿನ 'ಗಲಗಲಿ'ಯಿಂದ ಸುಮಾರು ನಾಲ್ಕು–ಐದು

ತಲೆಮಾರುಗಳ ಹಿಂದೆ ಹಲಸಂಗಿಗೆ ಬಂದು ನೆಲೆಸಿದರು. ಅಲ್ಲಿಂದ ಇವರ ಅಡ್ಡಹೆಸರು ಗಲಗಲಿ' ಎಂದಾಯಿತು. ತಂದೆ ಸಿದ್ಧಲಿಂಗಪ್ಪ ತಾಯಿ ಅಂಬವ್ವ. ಮಧುರಚೆನ್ನರು ಚಿಕ್ಕವರಿರುವಾಗಲೇ ಕ್ಷಯರೋಗಕ್ಕೆ ತುತ್ತಾದ ತಂದೆಯನ್ನು ಕಳೆದುಕೊಂಡರು. ಅಜ್ಜ ಮುತ್ತಜ್ಜರ ಕಾಲದಲ್ಲಿ ಅಗರ್ಭ ಶ್ರೀಮಂತಿಕೆಯಿಂದ ಕೂಡಿದ ಇವರ ಮನೆತನ ತಂದೆಯ ಕಾಲಕ್ಕೆ ಬಡತನ ಆವರಿಸಿತ್ತು. ಇಂತಹ ಪರಿಸ್ಥಿತಿಯಲ್ಲಿ ಮನೆಯ ಜವಾಬ್ದಾರಿ ತಾಯಿ ಅಂಬವ್ವ ಮತ್ತು ಮಗ ಚೆನ್ನಮಲ್ಲಪ್ಪರ ಮೇಲಾಯಿತು.

ಮಧುರಚೆನ್ನರು ಹುಟ್ಟಿದ್ದು 1903 ಜುಲೈ 31 ರಂದು. ತಾಯಿಯ ಸೋದರತ್ತೆಯ ಊರಾದ ಲೋಣಿಯಲ್ಲಿ. ತಾಯಿಯ ತವರೂರು ತಿಕೋಟಾ. ಅವರ ಮನೆಯಲ್ಲಿ ತುಂಬಾ ಬಡತನವಿದ್ದ ಕಾರಣ ತಾಯಿ ತಮ್ಮ ಸೋದರತ್ತೆಯ ಊರಿಗೆ ಹೋಗಬೇಕಾಯಿತು. ಈ ಲೋಣಿ ಗ್ರಾಮ ಹಲಸಂಗಿ ಯಿಂದ ಆರು ಮೈಲಿ ದೂರವಿದೆ (ಸದ್ಯ ಚಡಚಣಗೆ ಸೇರಿದ ಒಂದು ಗ್ರಾಮ), ಆಗ ಈ ಗ್ರಾಮ ಸಾಂಗಲಿ ಸಂಸ್ಥಾನದ ಆಡಳಿತಕ್ಕೆ ಒಳಪಟ್ಟಿತ್ತು.

ಚಿಕ್ಕಂದಿನಲ್ಲಿಯೇ ಕುಶಾಗ್ರಮತಿಗಳಾದ ಮಧುರಚೆನ್ನರು ಪಠ್ಯ ಮತ್ತು ಪಠ್ಯೇತರ ಚಟುವಟಿಕೆಗಳಲ್ಲಿ ಭಾಗವಹಿಸುತ್ತಿದ್ದರು. ಐದನೇ ತರಗತಿಯಲ್ಲಿ ಓದುತ್ತಿರುವಾಗ ಸಿರಿಯಾಳಶೆಟ್ಟಿಯ ಬಯಲಾಟದಲ್ಲಿ ಸಿರಿಯಾಳಶೆಟ್ಟಿಯ ಮಗ ಬಲ್ಲಾಳನ ಪಾತ್ರ ವಹಿಸಿದ್ದರು. ಇದೇ ಸಂದರ್ಭದಲ್ಲಿ ಸಿರಿಯಾಳಶೆಟ್ಟಿಯ ಜೀವನಕ್ಕೆ ಸಂಬಂಧಿಸಿದ 'ಸತ್ವ ಪರೀಕ್ಷೆ' ಎಂಬ ನಾಟಕವನ್ನು ಬರೆದರು. ಆದರೆ ಈ ನಾಟಕದ ಹಸ್ತಪ್ರತಿ ನಮಗೆ ಸಿಗದೇ ಇರುವುದು ನಮ್ಮ ದುರಾದೃಷ್ಟ. ಮಧುರಚೆನ್ನರ ವಿದ್ಯಾಭ್ಯಾಸದ ಕ್ರಮ ಸ್ನಾತಕೋತ್ತರ ಪರೀಕ್ಷೆಗೆ ಅಭ್ಯಾಸ ಮಾಡುವಂತೆ ಇತ್ತು. 1921 ರಲ್ಲಿ ಮುಲ್ಕೀ ಪರೀಕ್ಷೆ ಪಾಸುಮಾಡಿದ್ದರ ಜೊತೆಗೆ ಅಂದಿನ ಮುಂಬಯಿ ಕರ್ನಾಟಕಕ್ಕೆ (ವಿಜಯಪುರ, ಧಾರವಾಡ, ಬೆಳಗಾವಿ ಮತ್ತು ಕಾರವಾರ) ಪ್ರಥಮ ಸ್ಥಾನ ಪಡೆದಿದ್ದರು. ಮುಂದೆ ಕನ್ನಡ ಪಂಡಿತ ಪರೀಕ್ಷೆಗೆ ಓದಲು ಮೈಸೂರಿಗೆ ಹೋಗಲು ನಿರ್ಧರಿಸಿದಾಗ, ದೂರದ ಊರಿಗೆ ಕಳುಹಿಸಲು ತಾಯಿ ಒಪ್ಪಲಿಲ್ಲ. ಆದ್ದರಿಂದ ಅವರ ಶಿಕ್ಷಣ ಮುಲ್ಕೀ ಪರೀಕ್ಷೆಯವರೆಗೆ ಮಾತ್ರ ಸಾಧ್ಯವಾಯಿತು. ಆದರೆ ಅವರ ಅಧ್ಯಯನದ ದಾಹ ಮಾತ್ರ ಕಡಿಮೆಯಾಗಲಿಲ್ಲ. ವಿಜಯಪುರದ ಇಂಗ್ಲೀಷ್ ಅಧ್ಯಾಪಕರಾದ ಶ್ರೀ ಕೊಣ್ಣೂರ ಅವರಲ್ಲಿ ಇಂಗ್ಲೀಷ್ ಭಾಷೆ ಜೊತೆಗೆ ತಾವೇ ಸಂಸ್ಕೃತ, ಹಳೆಗನ್ನಡಗಳನ್ನು ಅಭ್ಯಾಸ ಮಾಡಿದರು. ಇವುಗಳ ಜೊತೆಗೆ ಬೆಂಗಾಲಿ ಮತ್ತು ಫ್ರೆಂಚ್ ಭಾಷೆ ಕಲಿತದ್ದು ವಿಶೇಷ. ಅವರ ವಿದ್ಯಾಭ್ಯಾಸ ಇನ್ನು ನಡೆಯುತ್ತಿರುವಾಗಲೇ ತಾಯಿಯ ಕರೆಗೆ ಮರಳಿ ಹಲಸಂಗಿಗೆ ಹೋಗಬೇಕಾಯಿತು. ಕಾರಣ ಆಗಲೇ ಮಧುರಚೆನ್ನರಿಗೆ ವಿವಾಹವಾಗಿತ್ತು. ಅವರ 16ನೇ ವಯಸ್ಸಿನಲ್ಲಿ ಅವರ ತಂದೆಯ ಮಲತಂಗಿಯಾದ ಸಿದ್ಧಲಿಂಗವ್ವನವರ ಮಗಳು ಬಸಮ್ಮನೊಂದಿಗೆ ವಿವಾಹವಾಗಿತ್ತು. ಆಗ ಬಸಮ್ಮ ಅವರಿಗೆ 12 ವರ್ಷ

ವಯಸ್ಸು. 1922 ರಲ್ಲಿ ಮಧುರಚೆನ್ನರು ಗೃಹಸ್ತ ಜೀವನಕ್ಕೆ ಕಾಲಿರಿಸಿದಾಗ ಅವರಿಗೆ 19 ವರ್ಷವಾಗಿತ್ತು. ತಮ್ಮ ಅಧ್ಯಯನ ಬಿಟ್ಟು ಹೋಗಲು ಮನಸ್ಸಿರಲಿಲ್ಲ. ತಾಯಿಯ ಕರೆಗೆ ಮರಳಿ ಹಲಸಂಗಿಗೆ ಹೋಗಲೇಬೇಕಾಯಿತು. ತಮ್ಮ ಅಧ್ಯಯನ ಬಿಡಬೇಕಾಯಿತಲ್ಲ ಎಂದು ತಮ್ಮ ತಳಮಳವನ್ನು 'ಬಡಕಬ್ಬಿನ ಬಡ ಬಡಿಕೆ' ಎಂಬ ಕವನದಲ್ಲಿ ವ್ಯಕ್ತಪಡಿಸಿದ್ದಾರೆ;

**"ಮಾಡಲಿನ್ನೇನು ನಾನೀ ನನ್ನ ಗಿಣಿರಾಮ**
**ಗೇನು ಮಾಡಲಿ? ಪ್ರೀತಿಯಿಂದಿದನು ಗಳಿಸಿದೆನು**
**ಹೊಟ್ಟೆಗಿಲ್ಲದೆ ಮರುಗಿ ಕೊರಗಿ ಸಾಯುವದಾಯ್ತು ನನ್ನ ಕೈಯಲ್ಲಿ ಸಿಕ್ಕು**
**ನನ್ನ ಜೀವನವೇ ನನ್ನ ಗಿಣಿರಾಮನಾ ಜೀವ**
**ನಿನಿನ್ನೂ ಬದುಕಲೇತಕೆ ನನ್ನ ಹಕ್ಕಿಯನು**
**ಕೊಂದು? ನನಗೀ ಜಗವು ಶೂನ್ಯವಾಯಿತು**
**ಹೇಡಿಯೆಂದು ಹೆಸರಾಯಿತು ಜಗದೆ"**

ಇಲ್ಲಿ ಜ್ಞಾನದ ಹಂಬಲವುಳ್ಳ ತಮ್ಮ ಅಂತರಂಗವನ್ನು 'ಗಿಣಿರಾಮ'ನಿಗೆ ಸಂಕೇತಿಸಿ ಚಿತ್ರಿಸಿದ್ದಾರೆ.

ಮಧುರಚೆನ್ನರು ಕನ್ನಡಿಗರಿಗೆ ಪರಿಚಿತವಾಗಿರುವುದು ಅನುಭಾವಿ ಕವಿಗಳೆಂದು. ನವೋದಯ ಕಾಲದ ಆರಂಭದಲ್ಲಿ ಕಾಣಿಸಿಕೊಂಡ ಕೆಲವೇ ಜನ ಅನುಭಾವಿ ಕವಿಗಳಲ್ಲಿ ಮಧುರಚೆನ್ನರು ಒಬ್ಬರು. ಇವರು ತತ್ವಶಾಸ್ತ್ರ, ಇತಿಹಾಸ, ಸಾಹಿತ್ಯ, ಜಾನಪದ ಮುಂತಾದ ಅನೇಕ ವಿಷಯಗಳಲ್ಲಿ ಲೇಖನಗಳು ಮತ್ತು ಪುಸ್ತಕಗಳನ್ನು ಪ್ರಕಟಿಸಿದ್ದಾರೆ. ಶಬ್ದಸಾಮ್ರಾಜ್ಯದಲ್ಲಿಯ ಮಂತ್ರಶಕ್ತಿಯ ಪುನರುಜ್ಜೀವನ, ಸತ್ಯ, ಹಲಸಂಗಿಯ ಲಾವಣಿಕಾರ ಖಾಜಾಭಾಯಿ, ಇತಿಹಾಸದ ಕವಿಗಳು, ಬಸವಣ್ಣನವರ ಭೋಜನ ಶಾಲೆ, ವಿಜಯಪುರ ಶಿಲಾಶಾಸನ– ಇವು ಇವರ ಮುಖ್ಯ ಲೇಖನಗಳು. 'ನನ್ನ ನಲ್ಲ'(1933) ಇವರ ಒಂದು ಜನಪ್ರಿಯ ಕವನ ಸಂಕಲನ. ಆತ್ಮ ಸಂಶೋಧನೆ(1935), ಪೂರ್ಣಯೋಗದ ಪಥದಲ್ಲಿ(1960) ಇವು ಆಧ್ಯಾತ್ಮಕ್ಕೆ ಸಂಬಂಧಿಸಿದ ಗ್ರಂಥಗಳು. ಪೂರ್ವರಂಗ(1932), ಕಾಳರಾತ್ರಿ(1933), ಬೆಳಗು(1937) ಈ ಕೃತಿಗಳಲ್ಲಿ ಆತ್ಮಕಥನವಿದೆ. ಕನ್ನಡಿಗರ ಕುಲಗುರು 'ಶ್ರೀವಿದ್ಯಾರಣ್ಯರು'(ಸಿಂಪಿ ಲಿಂಗಣ್ಣನವರೊಂದಿಗೆ) ಜೀವನ ಚರಿತ್ರೆ ಪ್ರಕಟಿಸಿದ್ದಾರೆ. ಮಾತೃವಾಣಿ, ಧರ್ಮಕ್ಷೇತ್ರೇಕುರುಕ್ಷೇತ್ರೇ, ಪೂರ್ಣಯೋಗ– ಇವು ಇವರು ಅನುವಾದಿಸಿರುವ ಗ್ರಂಥಗಳು. 1923ರಲ್ಲಿ ವಿಜಾಪುರದಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಮೊದಲ ಬಾರಿಗೆ ಮಧುರಚೆನ್ನರು ಜನಪದ ಸಾಹಿತ್ಯದ 'ಬೀಸುವ ಕಲ್ಲಿನ ಹಾಡು'ಗಳು ಎಂಬ ಲೇಖನ ಮತ್ತು ಪಟೇಲ ಧೂಲಾಸಾಹೇಬ ಅವರು 'ಲಾವಣಿಯ ಲಾವಣ್ಯ' ಎಂಬ ಪ್ರಬಂಧವನ್ನು ಮಂಡಿಸಿದರು. ಇಲ್ಲಿಂದಲೇ ಜನಪದ ಸಾಹಿತ್ಯದ ಸೊಗಸು

ಕನ್ನಡಿಗರ ಮನಸ್ಸು ಸೆಳೆಯಿತು. ನಂತರ ಜನಪದ ಸಾಹಿತ್ಯದ ಮೇಲೆ ಅಧ್ಯಯನಗಳು ಪ್ರಾರಂಭವಾದವು.

ಮಧುರಚೆನ್ನ ಎಂದೊಡನೆ ನಮಗೆ ನೆನಪಾಗುವುದು ಅವರ ಪ್ರಮುಖ ಕವನ ಸಂಕಲನ ನನ್ನ ನಲ್ಲ'. ತಮ್ಮ ಐವತ್ತು ವರ್ಷದ ಜೀವನಮಾನದಲ್ಲಿ ಪ್ರಕಟಿಸಿದ ಒಂದೇ ಒಂದು ಕವನ ಸಂಕಲನ ಇದಾಗಿದೆ. 1933 ರಲ್ಲಿ ಪ್ರಕಟವಾದಾಗ ಈ ಕವನ ಸಂಕಲನದಲ್ಲಿ ಹದಿನೈದು ಕವನಗಳು ಮಾತ್ರ ಇದ್ದವು. ಇದರ ಹೊರತಾಗಿಯೂ ಮಧುರಚೆನ್ನರು ಇನ್ನೂ ಹಲವಾರು ಕವಿತೆಗಳನ್ನು ಬರೆದರು. ಆದರೆ ಅವುಗಳನ್ನು ಪ್ರಕಟಿಸುವ ಗೋಜಿಗೆ ಹೋಗಲಿಲ್ಲ. 1955 ರಲ್ಲಿ ಅವರ ಅರವತ್ತು ಕವಿತೆಗಳು 'ನನ್ನ ನಲ್ಲ'ದಲ್ಲಿ ಸೇರಿಸಲಾಯಿತು.

**ಅನುಭಾವಿ ಗೀತೆಗಳು:**

ಮಧುರಚೆನ್ನರ ಅನುಭಾವಿ ಗೀತೆಗಳಲ್ಲಿ ಪ್ರಾರ್ಥನಾ ಗೀತೆಗಳು ಮತ್ತು ಆಧ್ಯಾತ್ಮ ಗೀತೆಗಳು ಎಂದು ವಿಭಾಗಿಸಬಹುದು. 'ಮಧುರಚೆನ್ನರ ಕೃತಿಗಳ ಅಧ್ಯಯನ ಅಷ್ಟು ಸರಳವಾದುದಾಗಿಲ್ಲ. ಅವರ ಆಧ್ಯಾತ್ಮಿಕ ಸಾಹಿತ್ಯ ವ್ಯಾಪಕವಾದ ಮತ್ತು ಬಹುಮುಖವಾದ ವ್ಯಾಸಂಗ ತಬ್ಬಿಬ್ಬುಗೊಳಿಸುವಂತಹದು. ಒಂದು ಆಯುಷ್ಯವುದ್ದಕ್ಕೂ ಮಾಡಿದ ಅವರ ಸಾಧನೆಯ ಹಲವು ಮೈಲುಗಲ್ಲುಗಳು ಅಲ್ಲಲ್ಲಿ ಕಂಡುಬರುತ್ತವೆ. ಅವುಗಳನ್ನೆಲ್ಲ ಇದ್ದಕ್ಕಿದ್ದಂತೆ ಅರಿತುಕೊಳ್ಳುವುದು ಸಾಹಸದ ಕೆಲಸ' ಎಂದು ಡಾ। ಗುರುಲಿಂಗ ಕಾಪಸೆ ಅವರು ಮಧುರಚೆನ್ನರ ಸಾಹಿತ್ಯದ ಬಗ್ಗೆ ಹೇಳುವರು.

ಮಧುರಚೆನ್ನರ ಸಲಿಗೆಯ ಸಲ್ಲಾಪ, ನೋಂಪಿ ಮತ್ತು 'ಕೆಸರೊಳಗಿನ ಕಮಲ' ಇವು ಅನುಭಾವಿ ಗೀತೆಗಳಲ್ಲಿ ಮುಖ್ಯವಾದವುಗಳಾಗಿವೆ. ಇವುಗಳ ಜೊತೆಗೆ ಅಗ್ರಸ್ಥಾನದಲ್ಲಿರುವ ಕವನಗಳೆಂದರೆ 'ದೇವತಾ ಪೃಥೀವಿ' ಮತ್ತು 'ನನ್ನ ನಲ್ಲ'. ಸಲಿಗೆಯ ಸಲ್ಲಾಪ'ದಲ್ಲಿ ಮಧುರಚೆನ್ನರೇ ಹೇಳಿದಂತೆ ಅವರ ಸಾಧನೆಯ ಮೊದಲ ಹಂತದಲ್ಲಿದ್ದ ಅಂತರಂಗದ ತಳಮಳವಾಗಿದೆ. ತಮ್ಮ ಮನದ ತಳಮಳವನ್ನು ಇದರಲ್ಲಿ ಚಿತ್ರಿಸಿದ್ದಾರೆ;

**"ಎಲ್ಲೆಲ್ಲಿರುವೆಯೊ ಅಲ್ಲಲ್ಲೆಲ್ಲಾ ನಿನ್ನನ್ನು ಕಂಡೇನು**
**ಇಲ್ಲಿಯ ಬಿಟ್ಟೆನ್ನೆಲ್ಲಿಯೊ ಹೋದರೆ ಅಲ್ಲೇನುಂಡೇನು?**
**ವನದಲ್ಲಿದ್ದವ ಮನೆಯಲ್ಲಿಲ್ಲವೆ? ವನಚರನೇ ನೀನು**
**ಮನೆಯಲ್ಲಿದ್ದರೆ ಮತ್ತೇತಕೆ ತಡ ಬೈಲಿಗೆ ಬಾ ನೀನು**
**ಸಾಧನೆಯಿಂದಲೆ ಸಾಧಿಸಿಕೊಳ್ಳಲು ಬೇತಾಳವೆ ನೀನು**
**ಹಾದರದವನಿಗೆ ಹುಟ್ಟಿದೆನೇನೋ? ನಿನ್ನವನೇ ನಾನು"**

ಕವಿ ಇಲ್ಲಿ ಭಗವಂತನ ಸಾಕ್ಷಾತ್ಕಾರಕ್ಕಾಗಿ ಹಂಬಲಿಸುತ್ತಾರೆ. ದೇವರ ಅಸ್ತಿತ್ವವನ್ನು ಪ್ರಶ್ನಿಸುತ್ತಾ, ದುಃಖದಿಂದ, ಕೋಪದಿಂದ ಮತ್ತು ಮೂದಲಿಕೆಯಿಂದಲೂ

ಪ್ರಶ್ನೆ ಮಾಡುತ್ತಾರೆ. ಕೋಪದಲ್ಲಿ ಪ್ರತಿಕಾರದ ಭಾವನೆ ಕಾಣದೇ, ಅಂತರಂಗದ ಕಳವಳವನ್ನು ವ್ಯಕ್ತಪಡಿಸುತ್ತಾರೆ.

'ನೋಂಪಿ' ಮಧುರಚೆನ್ನರ ನಿರ್ಮಲ ಭಕ್ತಿಯನ್ನು ತೋರಿಸುವ ಕವಿತೆ. ಈ ಕವಿತೆಯಲ್ಲಿ ಮಾಸ್ತಿಕಲ್ಲು ಮತ್ತು ನಿಸಿದಿಕಲ್ಲುಗಳಿಗೆ ಹೋಲಿಕೆ ಮಾಡಿಕೊಂಡು ತಮ್ಮ ಮನೋಧರ್ಮವನ್ನು ವ್ಯಕ್ತಪಡಿಸುವರು. ಮಹಾಸತಿ ತನ್ನ ಗಂಡನಿಗೆ ತನ್ನನ್ನೇ ತಾನು ಅರ್ಪಿಸಿಕೊಳ್ಳುವಂತೆ, ಕವಿ ಇಲ್ಲಿ ದೇವರನ್ನು ಕಾಣಬೇಕೆಂಬ ಆಶೆಯಿಂದ ಮಹಾಸತಿಯಂತೆ ತಮ್ಮನ್ನೇ ತಾವು ಅರ್ಪಿಸಿಕೊಂಡಿದ್ದಾರೆ;

**"ಹತ್ತೂ ನಿಟ್ಟಿಗೆ**
**ಹೊತ್ತಿಸಿ ಉರಿಯನು**
**ನಿತ್ತೆನು ನಾ ಕಿತ್ತಡಿಯಾಗಿ**
**ಹತ್ತೂ ನಿಟ್ಟಿಗೆ**
**ಹೊತ್ತಿಸಿ ಉರಿಯನು**
**ಕುತ್ತೆನು ನಾ ಮಾಸತಿಯಾಗಿ**
**ಪಡೆದರು ಸರಿಯೇ**
**ಮಡಿದರು ಸರಿಯೇ**
**ಮುಡಿಸುವೆ ಹರಣವನೆಡೆಯಾಗಿ**
**ಪಡೆದರು ಸರಿಯೇ**
**ಮಡಿದರು ಸರಿಯೇ**
**ಮುಡಿಸುವೆ ಮೈ ಮಲ್ಲಿಗೆಯಾಗಿ**
**ನೆನಸಿನ ಕೋರಿಕೆ**
**ಕನಸೇ ಆದರೆ**
**ತನು ನಿಸಿದಿಗೆಗಲ್ಲಾಗುವದು**
**ನೆನಸಿನ ಕೋರಿಕೆ**
**ಕನಸೇ ಆದರೆ**
**ಮನ ಮಾಸ್ತಿಯ ಕಲ್ಲಾಗುವುದು"**

ಈ ಸಾಧನೆಯಲ್ಲಿ ಅವರು ಮಡಿದರು ಸರಿ, ತಮ್ಮ ಮೈ ಮಲ್ಲಿಗೆಯಾಗಿಸಿ ಭಗವಂತನಿಗೆ ಅರ್ಪಿಸಲು ಸಿದ್ಧ. ಒಂದು ವೇಳೆ ಸೋತರೆ 'ತನು ನಿಸಿದಿಕಲ್ಲಾಗುವುದು, ಮನ ಮಾಸ್ತಿಕಲ್ಲಾಗುವುದು' ಎಂದು ಹೇಳುವರು.

'ಕೆಸರೊಳಗಿನ ಕಮಲ' ಕವನದಲ್ಲಿ ಆತ್ಮದ ಬಗ್ಗೆ ಹೇಳುತ್ತಾರೆ. ಇಲ್ಲಿನ 'ಕಮಲ' ಆತ್ಮವನ್ನು ಪ್ರತಿನಿಧಿಸುತ್ತದೆ. ಮನುಷ್ಯ ತನ್ನ ಪೂರ್ವಕರ್ಮಫಲಗಳಿಂದ ಪ್ರಪಂಚವೆಂಬ ಕೆಸರಿನಲ್ಲಿ ಕಮಲದಂತೆ ಹುಟ್ಟನ್ನು ಪಡೆಯುತ್ತಾನೆ. ಕೆಸರಲ್ಲಿ ಬಿದ್ದರೂ ಕಮಲದಂತೆ ಆಕಾಶದ ಕಡೆ ಮುಖ ಮಾಡುತ್ತಾನೆ. ತನ್ನ ಇರುವನ್ನು ಜಗತ್ತಿಗೆ ಪರಿಚಯಿಸುತ್ತಾನೆ;

“ಏಳು ಕಮಲವೆ, ನಿನ್ನ
ಯಾವ ಕರ್ಮದ ಬಂದು
ಇಂಥ ಕೆಸರಲ್ಲಿ ಬಿದ್ದೇ?
ಹೇಳು ಕಮಲವೆ, ನಿನ್ನ
ಯಾವ ಪುಣ್ಯದಿ ಮತ್ತೆ
ಮೊಗವೆತ್ತಿ ಮೇಲಕ್ಕೆದ್ದೇ?
ಹಾಗೇಯೇ;
ಹೇಳು ಕಮಲವೆ, ಮೇಲೆ
ಮುಖಮಾಡಿ ದೈನ್ಯಾಸ
ದಿಂದೇನು ನೋಡುತಿರುವೆ?
ಗೋಳಿಟ್ಟು ಗೋಣೆತ್ತಿ
ಕೈಮುಗಿದು ಕೈಲಾಸ
ದಿಂದೆನು ಬೇಡುತಿರುವೆ?
ಏನಿಲ್ಲ ಎಂತಿಲ್ಲ
ಅಲ್ಲೆನ್ನ ದೊರೆ ನಲ್ಲ
ನಲ್ಲೆಯರ ಬಳಗದೊಳಗೆ
ತಾನಲ್ಲಿ ಇಹನಲ್ಲ
ನನಿಲ್ಲ ಕೆಳಗಿಳಿಸಿ
ಕರೆಯುತ್ತಿಹನೊಳಗೆ ಒಳಗೆ”

ದೇವರ ಕಡೆ ಮುಖ ಮಾಡಿ, ಕರುಣೆಯಿಂದ ಕೈ ಮುಗಿದು ಬೇಡುವ ಭಕ್ತನ ಚಿತ್ರಿಸಿದ್ದಾರೆ. ತನ್ನ ನಲ್ಲನಾದ ದೇವರು ಅನೇಕ ನಲ್ಲೆಯರ(ಭಕ್ತರ) ಬಳಗದಲ್ಲಿ ವಾಸವಾಗಿದ್ದಾನೆ. ಒಳಗೆ ನನ್ನನ್ನು ಕರೆಯುತ್ತಿದ್ದಾನೆ ಎಂಬ ಕಲ್ಪನೆ ಇಲ್ಲಿ ಮೂಡಿ ಬಂದಿದೆ.

'ದೇವತಾ ಪೃಥಿವಿ' ಮಧುರಚೆನ್ನರ ಇನ್ನೊಂದು ಮಹತ್ವದ ಕವಿತೆ. ಮನುಷ್ಯ ಜೀವನ ಆಧ್ಯಾತ್ಮಿಕತೆಯ ತುತ್ತ ತುದಿಯನ್ನು ತಲುಪಿದ ನಂತರ, ಅಲ್ಲಿಂದ ತಾನು ಮಾಡಬೇಕಾದ ಸಾಧನೆಯ ಬಗ್ಗೆ ಹೇಳುತ್ತಾರೆ. ಆತ ತಲುಪಿದ್ದು 'ಪಾರಮಾರ್ಥಿಕ ಹಂತ'(Spirituality) ಎಂದು ಹೇಳುವರು;

“ಮೊಲೆಹಾಲು ಸಾಕಮ್ಮಾ ಸವಿಲಾಲಿ ಬೇಕಮ್ಮಾ
ಮುದ್ದಾಡಿ ರಮಿಸಿ ಮೈದಡವ। ಏಳಮ್ಮ
ಮಲಗಿರುವ ತಾಯಿ ಪೃಥಿವೀ।
ಹೊಟ್ಟೀಗಿ ಹಸಿವಿಲ್ಲ ಕರುಳೀಗಿ ಸೊಗಸಿಲ್ಲ
ಮೊಲೆ ಸಾಕು ಮುದ್ದುಕೊಡು ತಾಯಿ। ಏಳಮ್ಮಾ
ಮಲಗಿರುವ ತಾಯಿ ಪೃಥವೀ।
ಹಸಿವೀಗಿ ಮೊಲೆಯುಂಡೆ ಕಸವೀಸಿಗೇನುಳ್ಳೆ

**ಹಾಲೊಲ್ಲೆ ಸಾಕು ಬಿಗಿದಪ್ಪ! ಏಳಮ್ಮಾ**
**ಮಲಗಿರುವ ತಾಯಿ ಪೃಥವೀ!**
**ಮೊಲೆಹಾಲು ರುಚಿಗೊಂಡು ಮನದ್ವಾಲ ಬಯಸೀನ**
**ಗುಟುಗುಟುಕಿಗೊಮ್ಮೆ ಮಿಕಿಮಿಕಿ! ಏಳಮ್ಮಾ**
**ಮಲಗಿರುವ ತಾಯಿ ಪೃಥವೀ!''**

ಈ ಕವಿತೆಯ ಭಾವವನ್ನು ವಿವರಿಸಿದ ಕೀರ್ತಿನಾಥ ಕುರ್ತಕೋಟಿಯವರು ಹೀಗೆ ಹೇಳುತ್ತಾರೆ– ''ಪೃಥವೀಯ ಒಡಲಿನಲ್ಲಿಯೇ ದೇವತ್ವವನ್ನು ಕಾಣುವ ಹಂಬಲ, ಜಡ ಚೇತನಗಳೆಂಬುವು ಒಂದೇ ಶಕ್ತಿಯ ಎರಡು ಭಿನ್ನ ರೂಪಗಳು ಎಂಬ ನಂಬಿಕೆ ಈ ದರ್ಶನಕ್ಕೆ ಪ್ರೇರಕವಾಗಿದೆ. ಕವಿಯ ಅಂತಶ್ಚೇತನದ ಗೂಢ ವಿವರಗಳನ್ನು ಈ ದರ್ಶನ ಸೂಚ್ಯವಾಗಿ ತೋರಿಸುತ್ತದೆ. ತನ್ನ ಬಾಹ್ಯ ವ್ಯಕ್ತಿತ್ವದ ಪೋಷಣೆಗಾಗಿ ಹಸಿವನ್ನು ಹುಟ್ಟಿಸಿ, ತೃಪ್ತಿಗಾಗಿ ಮೊಲೆಯನ್ನೂಡಿದ ಪೃಥ್ವಿಯ ವಾತ್ಸಲ್ಯ ಅವಳ ಮನದ್ವಾಲಿನ ರುಚಿಯನ್ನು ನೋಡುವ ಹಸಿವನ್ನು ಕವಿಯಲ್ಲಿ ಕೆರಳಿಸಿದೆ'' ಎಂದು ನುಡಿದಿದ್ದಾರೆ.

'ನನ್ನ ನಲ್ಲ' ಮಧುರಚೆನ್ನರ ಹದಿನಾಲ್ಕು ವರ್ಷದ ದೈವತ್ವದ ಸಾಧನೆ. ಇದು ಅವರ ಆತ್ಮ ಕಥನ ಕಾವ್ಯ. ಈ ಕವಿತೆಯಲ್ಲಿ ಐದು ಎಸಳುಗಳಿವೆ(ಭಾಗಗಳು). ಒಂದೊಂದು ಎಸಳುಗಳಲ್ಲಿ ನಾಲ್ಕು ಸಾಲಿನ ಇಪ್ಪತ್ತು ಪದ್ಯಗಳಿವೆ. ಅಂದರೆ ಒಟ್ಟು 100 ಪದ್ಯಗಳಿವೆ. ಕವಿತೆ ಪ್ರತಿಭಾ ಸ್ತುತಿಯಿಂದ ಪ್ರಾರಂಭವಾಗುತ್ತದೆ;

**ಏನಮ್ಮಾ ಪ್ರತಿಭೆ ನೀನೀಸುದಿನವೆಲ್ಲಿದ್ದೆ?**
**ಮತ್ತೆ ಹೇಗಿಲ್ಲಿಗೇ ಮರಳಿ ಬಂದೆ!**
**ದಾನಮ್ಮ ನೀನೊಲಿಯೆ ಕೊರಡು ಕೊನರುವದೆಂದೆ**
**ಬರಡು ಹಯನಾಗಲೂ ಬಲ್ಲುದೆಂದೆ''**

ಮಧುರಚೆನ್ನರ ಆತ್ಮಕಥನವಾದ 'ನನ್ನ ನಲ್ಲ'ದಲ್ಲಿ ಜೀವ ಚರಿತ್ರೆಯ ಅಂಶಗಳ ಜೊತೆಗೆ, ಸಾಧನೆಯ ಪ್ರಾರಂಭ, ಭಗವಂತನನ್ನು ಕಾಣುವ ಹಂಬಲ, ಭಗವಂತನ ಬಗೆಗೆ ಹಲವು ವಿಚಾರಗಳು ಹಾಗೂ ಅವುಗಳ ಬಗ್ಗೆ ತಮ್ಮ ಅಸಮಾಧಾನ, ಪ್ರಕೃತಿಯ ಚೇತನ–ಅಚೇತನ, ದೇವರ ಅಸ್ತಿತ್ವದ ಬಗ್ಗೆ ಉಂಟಾದ ಜ್ಞಾನ, ಅದರಿಂದ ಉಂಟಾದ ತೃಪ್ತಿ ಮುಂತಾದವು ಈ ಕವಿತೆಯಲ್ಲಿದೆ. ಕವನದ ಮೊದಲನೆಯ ಎಸಳದಲ್ಲಿ ತಮ್ಮ ಹನ್ನೆರಡನೇಯ ಕಿರಿಯ ಪ್ರಾಯದಲ್ಲಿ ದೇವರನ್ನು ಕಾಣಲು ಹಂಬಲಿಸುತ್ತಾರೆ;

**''ಹನ್ನೆರಡು ತುಂಬಿಲ್ಲ ಕನ್ನಕ್ಕಿ ನಾನಂದು**
**ನನ್ನ ನಲ್ಲನ ಕತೆಗೆ ಮರಳುಗೊಂಡೆ!**
**ಇನ್ನೇನು ಹೇಳುವೆನು ಇಂದಿಗಿಪ್ಪತ್ತಾರು**
**ಈಸೊಂದು ದಿನ ಕೊರಗಿ ಗೊತ್ತುಗಂಡೆ**
**ಹಾಗೇಯೇ;**
**ದೇವರಾಯನ ಹೆಸರನೇಕೆ ಕೇಳಿದೆನಮ್ಮ**

**ನಾನೇಕೆ ನಂಜು ನುಂಗಿದೆನೆ ತಾಯೀ।**
**ಯಾವ ಕಡೆಗೂ ಮಗ್ಗಲೂರಗೊಡದಮ್ಮಯ್ಯ**
**ಈ ನೋವಾ ನಾ ತಾಳಲೆಂತ ತಾಯೀ''**

ಮನದ ನೋವು ಕಿಚ್ಚಾಗಿ ಹಗಲಿರುಳೂ ದಹಿಸುತ್ತಿದೆ. ಈ ಸ್ಥಿತಿಯಿಂದ ಹೊರಬರಲು ದೇವರಲ್ಲಿ ಮೊರೆಯಿಟ್ಟು ಕರುಣೆಯಿಂದ ಬೇಡಿಕೊಳ್ಳುವರು.

**''ಬೇಯುವೆನು ಬಾರೆಂದು ನೋಯುವೆನು ಬಾರೆಂದು**
**ಸಾಯುವೆನು ಸಲುಹಬಾರೆಂದು ಕರೆದೆ।**
**ತಾಯಿ ನೀ ಬಾರೆಂದು ತಂದೆ ನೀ ಬಾರೆಂದು**
**ಪರದೇಶಿಯನು ಪಾಲಿಸೆಂದು ಮೊರೆದೆ**
**ಹಲಬುವೆನು ಬಾರೆಂದು ಹಂಬಲಿಸುತಿಹೆನೆಂದೆ**
**ಹೊಲಬುಗೆಟ್ಟೆನು ಹೊರಳಿ ದಿಟ್ಟಿಸೆಂದೆ।**
**ನೆಲೆಗೆಟ್ಟೆ ಬಾರೆಂದೆ ಬಲಗೆಟ್ಟೆ ಬಾರೆಂದೆ**
**ಛಲಗೆಟ್ಟೆ ಕುಲಗೆಟ್ಟೆ ರಕ್ಷಿಸೆಂದೆ''**

ಈ ರೀತಿಯಾಗಿ ಮರುಗುವ, ಸೊರಗುವ, ಕೊರಗುವ, ನರಳುವ ತಳಮಳದಲ್ಲಿ ಮಧುರಚೆನ್ನರ ಭಕ್ತಿ ಅನನ್ಯವಾಗಿದೆ. ಹೀಗೆ ಪರಿಪರಿಯಾಗಿ ಬೇಡಿಕೊಂಡರೂ ಭಗವಂತನ ಸುಳಿವು ಕಾಣದಿದ್ದಾಗ, ದೈವಭಕ್ತಿ ಅಂತಃಕರಣದ ಕೋಪವಾಗಿ ಪರಿಣಮಿಸಿದ್ದು ಉಂಟು;

**''ಕಲ್ಲೆದೆಯ ಕಣಿಯೆಂದೆ ಕೊರಳು ಕೊಯ್ವವನೆಂದೆ**
**ಕರುಳು ಕರಗದ ಕುಟಿಲ ಕಟುಕನೆಂದೆ**
**ಸೊಲ್ಲಡಗಿತೇನೆಂದೆ ಛೀ ಸತ್ತೆಯೇನೆಂದೆ**
**ಬಲ್ಲಂತೆ ಬಾಯ್ಬಿಟ್ಟೆ ಬಯ್ದೆ ಅಂದೆ''**

ಹೀಗೆ ಭಗವಂತನನ್ನು ನಿಂದಿಸುವುದೂ ಒಂದು ಭಕ್ತಿಯೇ. ಭಗವಂತನನ್ನು ಎಷ್ಟೇ ಪರಿಪರಿಯಾಗಿ ಬೇಡಿಕೊಂಡರೂ ಪ್ರತ್ಯಕ್ಷನಾಗದ್ದಕ್ಕೆ ತುಂಬಾ ವ್ಯಥೆಪಟ್ಟುಕೊಳ್ಳುವರು;

**''ಯಾರ ಕೇಳಿದರಿಲ್ಲ ಯಾರು ಹೇಳಿದರಿಲ್ಲ**
**ಯಾರ ಬಳಿಯಲಿ ಅತ್ತು ಕರೆದರಿಲ್ಲ।**
**ಯಾರ ಕಡೆಗೇನುಂಟು ಮೀರಿಮಿಕ್ಕಿದ ಮಾತು**
**ಯಾರಾರ ಬಳಿಗು ನೆಲೆ ಕಾಣಲಿಲ್ಲ**
**ಮಾವು ಬೇವಾಯ್ತೆನಗೆ ಸವಿಯ ಕಹಿಯಾಯ್ತೆನಗೆ**
**ಕೂಳು ನೀರೆನಗೆ ನಂಜಾಯ್ತೆ ತಾಯೀ ।**
**ಜೀವ ಸಾಕಾಯ್ತೆನಗೆ ಸಾವು ಬೇಕಾಯ್ತೆನಗೆ**
**ಜಗವು ಕಿಚ್ಚಿನ ಕೊಂಡವಾಯ್ತೆ ತಾಯೀ''**

ಹೀಗೆ ದೇವರನ್ನು ಕಾಣಬೇಕೆಂಬ ಹಂಬಲ, ಹಂಬಲವಾಗಿಯೇ ಉಳಿದು, ಅವರ ಮನಸ್ಸು ಘಾಸಿಗೊಳಿಸಿತು. ಅವರಿಗೆ ಮಾವು ಬೇವಾಗಿದೆ, ಸಿಹಿಯು ಕಹಿಯಾಗಿದೆ, ಕೂಳು–ನೀರು ನಂಜಾಗಿದೆ, ಜೀವನವೂ ಸಾಕಾಗಿ, ಸಾವು ಬೇಕೆನಿಸಿದೆ. ಹೀಗೆ ತಮ್ಮ ಮನಸ್ಸಿನ ತಳಮಳವನ್ನು ವ್ಯಕ್ತಪಡಿಸುವರು.

ಕವಿಯು ಮೂರನೇಯ ಎಸಳದಲ್ಲಿ ಪ್ರಕೃತಿಯ ಸೃಷ್ಟಿಕರ್ತ ಭಗವಂತ, ಭಗವಂತನನ್ನು ಪ್ರಕೃತಿಯಲ್ಲಿಯೇ ಹುಡುಕುವ ಪ್ರಯತ್ನ ಮಾಡುವರು. ಅಕ್ಕಮಹಾದೇವಿ ಪ್ರಕೃತಿಯಲ್ಲಿ ಚೆನ್ನಮಲ್ಲಿಕಾರ್ಜುನನ್ನು ಹುಡುಕುವಂತೆ, ಮಧುರಚೆನ್ನರು ಪ್ರಕೃತಿಯಲ್ಲಿರುವ ಪ್ರಾಣಿ, ಪಕ್ಷಿಗಳಿಗೆ ಕೇಳುತ್ತಾ ಹೋಗುವರು;

"ನಿಲ್ಲು ನಿಲ್ಲೆಲೆ ನವಿಲೆ ನಿನ್ನ ಕಣ್ಣುಗಳೇಸು
ಕಣ್ಣ ಬಣ್ಣಗಳೇಸು ಎಣಿಸಲಾರೆ।
ಎಲ್ಲ ರೂಪಿಸಿದವನು ಎಲ್ಲಿ ತಾನಡಗಿದನೆ
ತಾಳಲಾರದು ಜೀವ ಹೇಳಬಾರೆ
ಪಿಳುಕಿಸದ ಸಿರಿಗಣ್ಣು ಸುತ್ತು ಚಿನ್ನದ ರೇಖೆ
ಬೆಳ್ಳಿಮಿರುಗಿನ ಮೈಯ ಕಾಂತಿ ನಿನಗೆ।
ತಿಳಿಗಂಗೆ ನಿಮ್ಮವ್ವ ಮೀನಮೂರುತಿ ತಿಳಿಸೂ
ನನ್ನೊಡೆಯನಡಗಿರುವನಾವಕಡೆಗೆ
ಆರದಾರತಿ ಹಿಡಿದು ಹಾರುತಿರುವವಳಾರೆ
ಹೊನ್ನಿ ಏ ಹೊನ್ನಿ ನೀನಾರೆ ಬಾರೆ ।
ಯಾರಿಗಾರತಿ ಒಯ್ವಿ ಹೇಳೆ ನಾನೂ ಬರುವೆ
ನನ್ನರಸನಿದ್ದಾನು ಅಲ್ಲಯಾರೆ
ಸಣ್ಣ ದನಿಯವಳಾರೆ ನುಣ್ಣ ದನಿಯವಳಾರೆ
ಹೆಣ್ಣುದನಿಗೈವ ಕೋಗಿಲೆಯೆ ಬಾರೆ ।
ಕಣ್ಣುತಪ್ಪಿಸಿದವನ ಕುರುಹು ಹೇಳೇ ತಾಯಿ
ಬನದಮ್ಮ ನೀನಾರೆ ಕರುಣೆತೋರೆ
ಮಾಣಿಕದ ಮೂಗಿನವ ಮೈ ಪಚ್ಚರತ್ನದವ
ಹಣ್ಣು ಕುಕ್ಕುತ ಹಾರುವಣ್ಣ ಬಾರೋ।
ಜಾಣ ರಂಗಯ್ಯ ತಾ ಕಾಣದಡಗಿದನೆಲ್ಲಿ
ಗಿಣಿರಾಮ ನೀನಾರೆ ಸುದ್ದಿ ಬೀರೊ
ಬೆಳದಿಂಗಳಿರುಳಲ್ಲಿ ನಟ್ಟನಡುರಾತ್ರಿಯಲಿ
ಸಪ್ಪಳಿಲ್ಲದ ಗಪ್ಪುಗಾರಿನಲ್ಲಿ।
ಕೊಳದ ಬಾಂದಳದಲ್ಲಿ ಟಿಂವ್‌ಗುಡುವ ಟೀಂವಕ್ಕಿ
ನೀನಾರೆ ಬಲ್ಲೆಯಾ ನಲ್ಲನೆಲ್ಲ"

ನವಿಲು, ಮೀನು, ಹೊನ್ನಿ, ಕೋಗಿಲೆ, ಗಿಳಿ ಮತ್ತು ಟೀಂವಕ್ಕಿ ಇವುಗಳೊಂದಿಗೆ ಕವಿಯು ಮಾತನಾಡಿಸುತ್ತಾ ಹೊರಟ ಜೀವ ಚೇತನಗಳು. ಇವೆಲ್ಲ ಹಲಸಂಗಿಯ

ಸುತ್ತ-ಮುತ್ತ ಕಂಡು ಬರುವ ಜೀವಿಗಳಾಗಿದ್ದವು. ನವಿಲಿಗಂತೂ ಹಲಸಂಗಿ ಹೆಸರುವಾಸಿಯಾಗಿತ್ತು. ಶಿವರಾಮ ಕಾರಂತರು ಹಲಸಂಗಿಗೆ ಭೇಟಿ ಕೊಟ್ಟಾಗ ಅಗಸಿಯ ಬಾಗಿಲಿನ ಮೇಲೆ ಗರಿ ಬಿಚ್ಚಿ ಸ್ವಾಗತಿಸಿದ ನವಿಲುಗಳನ್ನು ನೋಡಿ ಕಾರಂತರು ಹಲಸಂಗಿಗೆ 'ನವಿಲೂರು' ಎಂದು ಕರೆದರು. ಒಟ್ಟಿನಲ್ಲಿ ಕಾವ್ಯದಲ್ಲಿ ಕಾಣುವ ಅವುಗಳ ಚಿತ್ರ ಹಾಗೂ ಕವಿಯ ಕಲ್ಪನೆ ಅಸಾಧಾರಣವಾಗಿದೆ. ಹಾಗೇಯೇ ಸಾಹಿತ್ಯದ ಕಾರಣ ಒಂದಾದ ಮಧುರಚೆನ್ನ ಮತ್ತು ಬೇಂದ್ರೆಯವರ ಸಂಬಂಧ ಸುಮಾರು 32 ವರ್ಷಗಳ ಕಾಲ ಅಣ್ಣ-ತಮ್ಮಂದಿರಂತೆ ನಡೆದುಕೊಂಡು ಬಂದಿತು. ಬೇಂದ್ರೆಯವರು ಮಧುರಚೆನ್ನರ 'ಅಂತರಂಗದ ಅಣ್ಣಯ್ಯ'ನೇ ಆಗಿದ್ದರು. 'ನನ್ನ ನಿನ್ನ ಬೆನ್ನ ಬಳಿ ವಿಶಾಲ ವೃಕ್ಷ ಬೆಳೆದಿದೆ' ಎಂದು ಬೇಂದ್ರೆಯವರು ಹಾಡಿದರೆ, 'ಬೆನ್ನು ಬೆನ್ನಲಿ ಬೆಸೆದ ಏಕತೇಜದ ಎರಡು ಹಿರಿಕಿರಿಯ ಪಿಂಡಗಳೆಂದ' ಎಂದು ಮಧುರಚೆನ್ನರು ಹಾಡಿದರು.

ಒಟ್ಟಿನಲ್ಲಿ ಮಧುರಚೆನ್ನರ 'ನನ್ನ ನಲ್ಲ' ಆಧುನಿಕ ಕನ್ನಡ ಕಾವ್ಯದಲ್ಲಿ ಆಧ್ಯಾತ್ಮಿಕ ಆತ್ಮಕಥನವಿರುವ, ವಿಶಿಷ್ಟ ಏಕೈಕ ಖಂಡಕಾವ್ಯ. ವಿ. ಕೃ. ಗೋಕಾಕರು 'ನನ್ನ ನಲ್ಲ' ಕವಿತೆಯ ಬಗ್ಗೆ ಮಾತನಾಡುತ್ತಾ- "ಶ್ರೀ ಮಧುರಚೆನ್ನರ 'ನನ್ನ ನಲ್ಲ'ವೆಂಬ ನೀಳ್ಗವನವು ವಿಶ್ವದ ಯಾವುದೇ ಉಜ್ವಲವಾದ ಅನುಭಾವಗೀತದೊಡನೆ ಸರಿತೂಗಿ ನಿಲ್ಲಬಲ್ಲುದು. ಅನುಭಾವಗೀತದ ಹೊಸ ಪರಿಯನ್ನೊಂದು ಅವರು ಕನ್ನಡ ಸಾಹಿತ್ಯಕ್ಕೆ ನೀಡಿದ್ದಾರೆ. ಕನ್ನಡಿಗರು ಹೆಮ್ಮೆ ಪಡುವಂತಹ ಕೃತಿಯಿದು" ಎಂದಿರುವುದನ್ನು ನೆನೆಯಬಹುದು.

## ಪರಾಮರ್ಶನ ಗ್ರಂಥಗಳು:

1. ಗುರುಲಿಂಗ ಕಾಪಸೆ, (೧೯೭೬), ಮಧುರಚೆನ್ನ, ಹಲಸಂಗಿ ಗೆಳೆಯರ ಪ್ರತಿಷ್ಠಾನ, ವಿಜಯಪುರ.
2. ಮಧುರಚೆನ್ನ, (1933), ನನ್ನ ನಲ್ಲ, ಹಲಸಂಗಿ ಗೆಳೆಯರ ಪ್ರತಿಷ್ಠಾನ, ವಿಜಯಪುರ.

**Funding:**
This study was not funded by any grant.

**Conflict of interest:**
The Authors have no conflict of interest to declare that they are relevant to the content of this article.

**About the License:**
© The Authors 2024. The text of this article is open access and licensed under a Creative Commons Attribution 4.0 International License.